

# ಮುರಿದ ಮನೆ – ಮನಸ್ಸುಗಳು ಹಾಗೂ ಪ್ರೇಮದ ಘಮ

ಸಂತಾನೋತ್ಪತ್ತಿಯ ಸಹಜ ಪ್ರಾಕೃತಿಕ ಪ್ರಕ್ರಿಯೆಯ ವಿಕರಾಳ ಸಮಸ್ಯೆ ಎಂದರೇನು, ಸಂತಾನ ಸಹಜವಾಗಿ ಲಭಿಸದ ದಂಪತಿಗಳಿಗೆ ಅದೆಷ್ಟು ವ್ಯಥೆಯಾಗಬಹುದು ಎಂಬುದು ಆಗ ನಮ್ಮ ಅರಿವಿಗೆ ಬಂತು.

ಮೊದಲು ನೀನಾ ಪ್ರಾಕೃತಿಕ ಉಪಚಾರಗಳನ್ನು ಮಾಡಿದಳು; ಅಕ್ಯೂಪಂಕ್ಚರ್, ಬೇರು–ನಾರು, ಆಹಾರದಲ್ಲಿ ಬದಲಾವಣೆ ಮಾಡಿಕೊಂಡಳು. ಕೆಲವು ದಿನ ತನ್ನ ಪ್ರೀತಿಯ ಸಿಗರೇಟು ಸೇವನೆಯನ್ನು ಸಹ ತ್ಯಜಿಸಿದಳು. ಇವುಗಳಿಂದ ಅವಳಿಗೆ ಲಾಭವಾದರೂ, ಅವಳು ಗರ್ಭಿಣಿಯಾಗುವಲ್ಲಿ ಯಶಸ್ವಿಯಾಗಲಿಲ್ಲ.

ಪ್ರಾಕೃತಿಕ ವಿಧಾನದಿಂದ ಯಶಸ್ಸು ಲಭಿಸದಿದ್ದಾಗ, ನಾವು ಕೃತ್ರಿಮ ಗರ್ಭದಾನದ ಆಸರೆ ಪಡೆದೆವು. ಅನೇಕ ಪ್ರಜನನ ತಂತ್ರಗಳ ಪ್ರಯೋಗ ನಡೆದವು. ಐಯುಐ, ಐಸಿಐ ಯಶಸ್ವಿಯಾಗಲಿಲ್ಲ. ನಂತರ ಐವಿಎಫ್– ಇನ್‌ವಿಟ್ರೊ ಫರ್ಟಿಲೈಸೇಷನ್ ಸಮಯ ಬಂತು. ಪ್ರಯೋಗಶಾಲೆಯಲ್ಲಿ ಅಂಡಾಣು ಮತ್ತು ಶುಕ್ರಾಣುಗಳ ಕೃತ್ರಿಮ ಫಲೀಕರಣ, ನಂತರ ಗರ್ಭಾಶಯದಲ್ಲಿ ಭ್ರೂಣದ ಕಸಿ... ಸಂಪೂರ್ಣ ಪ್ರಕ್ರಿಯೆಗೆ ಒಂದು ಒಂದೂವರೆ ತಿಂಗಳುಗಳು ಬೇಕಾಗುತ್ತಿತ್ತು. ನಾವು ವಿವಾಹದ ಮೂರೂವರೆ ವರ್ಷಗಳ ನಂತರ ಮೊದಲ ಐವಿಎಫ್ ಮಾಡಿಸಿಕೊಂಡೆವು. ನಂತರ ಎರಡನೆಯ, ನಂತರ ಮೂರನೆಯ, ನಂತರ ನಾಲ್ಕನೆಯ...

ಆದರೆ ಪ್ರತಿ ಬಾರಿಯೂ ಗರ್ಭಾಶಯ ಭ್ರೂಣವನ್ನು ತನ್ನಲ್ಲಿ ಹಿಡಿದಿಟ್ಟುಕೊಳ್ಳಲು ವಿಫಲವಾಗುತ್ತಿತ್ತು. ನನ್ನ ಬೀಜ ಅವಳ ಗರ್ಭದಲ್ಲಿ ಅರಳದಾಯಿತು.

ಒಟ್ಟಿನಲ್ಲಿ ಈ ವಿಧಾನ ಎಷ್ಟು ಜಟಿಲವೆಂದರೆ, ಶರೀರ ತುಂಬಾ ಬಳಲುತ್ತದೆ, ಹಣ ಖರ್ಚಾಗುತ್ತದೆ. ಕೊನೆಯಲ್ಲಿ ನಿರಾಸೆ ಮತ್ತು ವ್ಯಥೆಯನ್ನು ಅನುಭವಿಸಬೇಕಾಗುತ್ತದೆ. ನಾನು ನನ್ನ ವೀರ್ಯವನ್ನಷ್ಟೇ ಕೊಡಬೇಕಾಗುತ್ತಿತ್ತು. ಆದರೆ ನೀನಾಳ ಇಡೀ ಸ್ತ್ರೀಚಕ್ರ ಧಗಧಗಿಸುತ್ತಿತ್ತು. ನಿಯಮಿತವಾಗಿ ರಕ್ತಪರೀಕ್ಷೆ, ನಿತ್ಯ ಹಾರ್ಮೋನ್ ಇಂಜೆಕ್ಷನ್, ನಿರಂತರವಾಗಿ ಚಿಕಿತ್ಸೆಯ ಬಗ್ಗೆ ನಿರೀಕ್ಷಣೆ, ಶಾರೀರಿಕ ಮತ್ತು ಭಾವನಾತ್ಮಕವಾಗಿ ಈ ಉಪಚಾರ ಮಹಿಳೆಯನ್ನು ತುಂಡರಿಸುತ್ತದೆ. ಆದರೂ ನೀನಾಳಿಗೆ ನನ್ನ ಮಗುವಿನ ತಾಯಿಯಾಗುವ ಆಸೆಯಿತ್ತು. ಕರೀನಾ ಮತ್ತು ಜೊಹಾನಾ ಹುಟ್ಟಿದ್ದಾಗ ತಾನು ತರುಣಿಯಾಗಿದ್ದೆ, ಅಪರಿಚಿತಳಾಗಿದ್ದೆ ಎಂದು ನೀನಾ ಹೇಳುತ್ತಿದ್ದಳು.

ಅಂದು ನಾವು ಫರ್ಟಿಲಿಟಿ ಕ್ಲಿನಿಕ್‌ನಿಂದ ಮನೆಗೆ ಬಂದಿದ್ದೆವು. ಎರಡನೆಯ ಐವಿಎಫ್ ಫೇಲ್ ಆಗಿತ್ತು. ಮನೆಗೆ ಬಂದ ನಾವು ವಿಷಾದದಲ್ಲಿ ಮೌನವಾಗಿ ಕೂತಿದ್ದೆವು.

‘ಇನ್ನು ಮತ್ತೆ ಐವಿಎಫ್ ಬೇಡ’ ನಾನು ಘೋಷಿಸಿದೆ.

‘ಪಾಲ್...’ ಅವಳು ಮೆಲ್ಲನೆ ಕರೆದಳು.

ನಾನು ಅವಳನ್ನು ನೋಡಿದೆ.

‘ನಾನು ಕರೀನಾಳನ್ನು ಮದುವೆಗೆ ಮೊದಲೇ ಕನ್ಸೀವ್ ಮಾಡಿಕೊಂಡಿದ್ದೆ’.

‘ನನಗೆ ಗೊತ್ತಿದೆ’.

‘ನನ್ನ ಅಪ್ಪ–ಅಮ್ಮ ನನ್ನ ಪ್ರೆಗ್ನೆನ್ಸಿಯಲ್ಲಿ ನನ್ನನ್ನು ಅಪರಾಧ ಪ್ರಜ್ಞೆಯಿಂದ ನೋಡುತ್ತಿದ್ದರು. ಅವರು ನನಗೆ ಕುಲ ಕಳಂಕಿನಿ ಎನ್ನುತ್ತಿದ್ದರು. ಜೊಹಾನಾ ಹುಟ್ಟುವ ವೇಳೆಯಲ್ಲಿ ಓಲಿವರ್‌ನೊಂದಿಗೆ ನನ್ನ ವಿಚ್ಛೇದನ ಪ್ರಕ್ರಿಯೆ ನಡೆಯುತ್ತಿತ್ತು. ಎರಡೂ ಪ್ರೆಗ್ನೆನ್ಸಿಯ ವೇಳೆಯಲ್ಲಿ ನಾನು ಅತೀವ ಒತ್ತಡಕ್ಕೊಳಗಾಗಿದ್ದೆ. ನಾನು ಮತ್ತೆ ಮಾತೃತ್ವದ ಅನುಭವವನ್ನು ಪಡೆಯಲು ಬಯಸುತ್ತೇನೆ. ನಿಮ್ಮ ಮಗುವಿನ ತಾಯಿಯಾಗಲು ಬಯಸುತ್ತೇನೆ. ನನಗೊಬ್ಬ ಮಗ ಬೇಕು’ ನೀನಾ ಕಳವಳದಿಂದ ಹೇಳಿದಳು.

ಅವಳಲ್ಲಿ ಜೀವನದ ಅನೇಕ ಆಸೆಗಳಿದ್ದವು; ಅವಳ ಕಣ್ಣುಗಳಲ್ಲಿ ಅನೇಕ ಕನಸುಗಳು ಮೂಡಿ ಬಾಡುತ್ತಿದ್ದವು.

‘ಮಗನೇ ಆಗುತ್ತಾನೆಂಬ ಗ್ಯಾರಂಟಿ ಏನು?’

‘ಯಾವ ವಿಷಯಕ್ಕೂ ಗ್ಯಾರಂಟಿ ಇಲ್ಲ. ನಾವು ಚಾನ್ಸನ್ನಷ್ಟೇ ನೋಡಬಹುದು. ಚಾನ್ಸ್ ನೋಡದಿದ್ದರೆ ಯಾವುದೂ ಸಾಧ್ಯವಿಲ್ಲ. ಮಗನೂ ಇಲ್ಲ, ಮಗಳೂ ಇಲ್ಲ.’

ನೀನಾ ಪದೇ ಪದೇ ಐವಿಎಫ್‌ನ ಭಯಾನಕ ಪ್ರಕ್ರಿಯೆಗೆ ಒಳಗಾಗಲೆಂದು ನಾನು ಬಯಸುತ್ತಿರಲಿಲ್ಲ. ಹೀಗಾಗಿ ನಾನು ಎರಡು ಐವಿಎಫ್‌ನ ಅಪಯಶಸ್ಸಿನ ಬಳಿಕ ಅದನ್ನು ಅಲ್ಲಗಳೆದಿದ್ದೆ. ಆದರೆ ನೀನಾ ಒಪ್ಪಲಿಲ್ಲ, ನನ್ನೊಂದಿಗೆ ಹಟ ಮಾಡುತ್ತಿದ್ದಳು. ಅವಳ ಹಟಕ್ಕೆ ಒಂದು ವರ್ಷದ ನಂತರ ಮತ್ತೆ ನಾವಿಬ್ಬರು ಫರ್ಟಿಲಿಟಿ ಕ್ಲಿನಿಕ್‌ಗೆ ಹೋದೆವು. ಎರಡು ಅಪಯಶಸ್ಸಿನ ಐವಿಎಫ್ ಅನ್ನು ಮತ್ತೆ ಎದುರಿಸಬೇಕಾಯಿತು. ನೀನಾಳಿಗೆ ನಲ್ವತ್ತು ವರ್ಷಗಳಾದವು. ನಾವಿಬ್ಬರು ಮಕ್ಕಳ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿದೆವು.

ಒಂದು ವಿಷಯವನ್ನು ಗಮನಿಸಬೇಕಿತ್ತು. ನೀನಾ ಮತ್ತು ನನಗೆ ಮಕ್ಕಳಿದ್ದರು. ನಮ್ಮಿಬ್ಬರಿಗೆ ಇಬ್ಬರು ಇಬ್ಬರು ಪುತ್ರಿಯರಿದ್ದರು. ದೇವರು ಕರುಣಿಸಿದ್ದರಲ್ಲಿ ನಾವು ತೃಪ್ತಿ ಪಡಬೇಕಿತ್ತು. ನಮ್ಮ ಮಕ್ಕಳಿಗೂ ಸಹೋದರರು ಸಹೋದರಿಯರ ಕೊರತೆಯಿರಲಿಲ್ಲ. ಅತ್ತ ಲೂಸಿ ಮತ್ತು ಗ್ರೇಸಿಗೆ ತಮ್ಮ ತಾಯಿಯ ಎರಡನೆಯ ಪತಿಯ ಸಹೋದರನೊಬ್ಬನಿದ್ದ. ಇತ್ತ ಕರೀನಾ ಮತ್ತು ಜೊಹಾನಾಳ ತಂದೆಯ ಎರಡನೆಯ ಪತ್ನಿಯ ಒಬ್ಬ ಸಹೋದರ ಮತ್ತು ಒಬ್ಬ ಸಹೋದರಿಯಿದ್ದಳು. ದೇವರ ದಯೆಯಿಂದ ಎಲ್ಲರ ಸಂಬಂಧ ಉತ್ತಮವಾಗಿತ್ತು; ಹೀಗಾಗಿ ನಾನು ಮತ್ತು ನೀನಾ ನಮ್ಮ ಮಗುವಿನ ಆಸೆಯನ್ನು ಕೈಬಿಟ್ಟೆವು. ‘ನಿನ್ನ ಮಕ್ಕಳು – ನನ್ನ ಮಕ್ಕಳು’ ಈ ವಾಕ್ಯ ನಮ್ಮಿಬ್ಬರ ನಡುವೆ ಧ್ವನಿಸುತ್ತಿತ್ತು. ‘ನಮ್ಮ ಮಕ್ಕಳು’ ಎಂಬ ಮಾತು ನಮ್ಮ ನಡುವೆ ಬರಲಿಲ್ಲ.

ಓಹ್! ಒಂದು ದೀರ್ಘ ಸಮಯ ನೀನಾಳೊಂದಿಗೆ ಚೆನ್ನಾಗಿಯೇ ಕಳೆದಿತ್ತು. ನಂತರ... ತುಂಬಾ ಜನ ವಿವಾಹವಾಗುತ್ತಾರೆ. ಆದರೆ ಅವರು ವಿವಾಹದೊಂದಿಗೆ ಮುಂಬರುವ ಒಪ್ಪಂದ, ತ್ಯಾಗ, ಬಲಿದಾನ, ಸಂಘರ್ಷ, ಸಮಸ್ಯೆಗಳು ಮತ್ತು ಚಿಂತೆಗಳ ವಿಷಯದಲ್ಲಿ ಯೋಚಿಸುವರೇ? ಅದಕ್ಕಾಗಿ ತಮ್ಮನ್ನು ಸಿದ್ಧಪಡಿಸಿಕೊಳ್ಳುವರೇ? ಪ್ರತಿಯೊಂದು ವಿವಾಹದಲ್ಲಿ ಒಂದಲ್ಲಾ ಒಂದು ಸಮಸ್ಯೆ ಮತ್ತು ತೊಡಕಿರುತ್ತದೆ. ಇಬ್ಬರು ವ್ಯಕ್ತಿಗಳು ಒಂದೇ ಭಾಷೆಯನ್ನು ಮಾತನಾಡಿದ್ದಾಗ್ಯೂ, ಅವರು ಒಬ್ಬರು ಇನ್ನೊಬ್ಬರ ಮಹತ್ವದ ಸಂಕೇತಗಳನ್ನು ಅರ್ಥ ಮಾಡಿಕೊಳ್ಳದಿದ್ದಾಗ ತಪ್ಪು ಭಾವನೆಗಳು ಉದ್ಭವಿಸುತ್ತವೆ. ನಾನು ಇಬ್ಬರು ಮಹಿಳೆಯರನ್ನು ವಿವಾಹವಾದೆ, ಎರಡು ಮೂರು ಹೆಂಡತಿಯರೊಂದಿಗೆ ನನ್ನ ಅಸ್ಥಿರ ಸಂಬಂಧ ಸಹ ಇತ್ತು; ಆದರೆ ನಾನು ನನ್ನ ಅನುಭವದಿಂದ ಹೇಳುವುದೇನೆಂದರೆ, ಪತಿ–ಪತ್ನಿಗೆ ಭಾಷೆಗಿಂತ ಭಾವನೆಗಳು ಮತ್ತು ಸಂಕೇತಗಳನ್ನು ಅರ್ಥ ಮಾಡಿಕೊಳ್ಳುವುದು ಹೆಚ್ಚು ಅರ್ಥಪೂರ್ಣವಾಗುತ್ತದೆ.

ತರ್ಕ–ವಿತರ್ಕ, ಮಾನಸಿಕ ಒತ್ತಡ, ಎರಡು ಮೌನ ಸಮಾನಾಂತರ